ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ:

414 (481) ಶ್ರೀ ಎಸ್. ಅಂಗಾರ್ (ಸೂಳ್ಯ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 ರಿಂದ 1996ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಭೂಮಿಯನ್ನು ಒದಗಿಸಲಾಗಿದೆ. (ತಾಲ್ಲೂಕುವಾರು ಹಾಗೂ ವ್ಯಕ್ತಿಗಳ ವಿವರ ನೀಡುವುದು).

ಆ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಸಾಮೂಹಿಕ ಕೊಳವೆಬಾವಿಯನ್ನು 1994 ರಿಂದ 1996ರ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಹಾಕಲಾಯಿತು. (ತಾಲ್ಲೂಕುವಾರು ವಿವರ ನೀಡುವುದು) ಅದಕ್ಕೆ ತಗುಲಿದ ವೆಚ್ಚ ಎಷ್ಟು;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ನಿಗಮದಿಂದ ಜಮೀನು ಉಳ್ಳ ಎಷ್ಟು ಜನ ಫಲಾನುಭವಿಗಳಿಗೆ ಪಂಪ್ ಸೆಟ್‌ಗಳನ್ನು ವಿತರಿಸಲಾಗಿದೆ; ಎಷ್ಟು ಖರೀದಿಸಲಾಗಿದೆ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1994 ರಿಂದ 1996 ರವರೆಗೆ ಪಂಪ್‌ಸೆಟ್‌ಗಳನ್ನು ಎಷ್ಟು ಒದಗಿಸಲಾಗಿದೆ. ಒಂದು ಪಂಪ್‌ಸೆಟ್ಟಿನ ಬೆಲೆ ಎಷ್ಟು? (ತಾಲ್ಲೂಕುವಾರು ವಿವರ ಹಾಗೂ ವರ್ಷಾನುವಾರು ವಿವರ ನೀಡುವುದು).

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ಭೂ ಒಡೆತನ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈವರೆಗೂ ಜಮೀನು ಖರೀದಿಸಿರುವುದಿಲ್ಲ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಸಾಮೂಹಿಕ ಕೊಳವೆ ಬಾವಿಯನ್ನು ಹಾಕಲಾಗಿರುವುದಿಲ್ಲ.

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 63 ಪರಿಶಿಷ್ಟ ಜಾತಿ ಮತ್ತು 53 ಪರಿಶಿಷ್ಟ ವರ್ಗದ ಫಲಾನುಭರಿಗಳಿಗೆ ಪಂಪ್‌ಸೆಟ್‌ಗಳನ್ನು ವಿತರಿಸಲಾಗಿದೆ. 116 ಪಂಪ್‌ಸೆಟ್‌ಗಳನ್ನು ಖರೀದಿಸಲಾಗಿದೆ.

ಈ) 1994 ರಿಂದ 1996 ರವರೆಗೆ 116 ಪಂಪ್‌ಸೆಟ್‌ಗಳನ್ನು ಒದಗಿಸಲಾಗಿದೆ, ಒಂದು ಡೀಸೆಲ್ ಪಂಪ್‌ಸೆಟ್‌ನ ಬೆಲೆ ರೂ. 16,342-00, ಎಲೆಕ್ಟ್ರೀಕ್ ಪಂಪ್‌ಸೆಟ್‌ನ ಬೆಲೆ ರೂ.13,200-00, ತಾಲ್ಲೂಕುವಾರು ವರ್ಷವಾರು ವಿವರ ಕೆಳಗಿನಂತಿದೆ:-

ಕ್ರ. ಸಂ.	ತಾಲ್ಲೂಕು	ವಿತರಣೆಯಾದ ಪಂಪ್‌ಸೆಟ್‌ಗಳು			
		1994-95		1995-96	
		ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
1.	ಪುತ್ತೂರು	17	-	10	09
2.	ಸೂಳ್ಯ	07	-	02	03
3.	ಬಂಟ್ವಾಳ	08	02	06	25
4.	ಉಡುಪಿ	02	-	-	-
5.	ಮಂಗಳೂರು	-	-	01	-
6.	ಕಾರ್ಕಳ	-	-	08	-
7.	ಬೆಳ್ತಂಗಡಿ	-	-	02	14
	ಒಟ್ಟು	34	02	29	51

ಬಳ್ಳಾರಿ ವಿಮಾನ ನಿಲ್ದಾಣದ ಬಗ್ಗೆ

417 (479) ಶ್ರೀ ಅಲ್ಲಮ್ ವೀರಭದ್ರಪ್ಪ (ಕುರುಗೊಡು):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವಿಮಾನ ನಿಲ್ದಾಣವು ರಾಜ್ಯ ಸರ್ಕಾರದ ಹತೋಟಿಯಲ್ಲಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ವಿಮಾನ ನಿಲ್ದಾಣವನ್ನು ಖಾಸಗಿ ವಲಯದಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಯಾವುದಾದರೂ ಕ್ರಮಗಳನ್ನು ಕೈಗೊಂಡಿದೆಯೇ?

ಇ) ಹಾಗಿದ್ದಲ್ಲಿ ವಿವರ ನೀಡುವುದು

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ರಾಜ್ಯ ಸರ್ಕಾರದ ಇಚ್ಛೆಯಂತೆ, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತವು ರೈಲ್ ಇಂಡಿಯ ಟೆಕ್ನಿಕಲ್ ಅಂಡ್ ಎಕನಾಮಿಕ್ ಸರ್ವಿಸಸ್ ಲಿಮಿಟೆಡ್ (ರೈಟ್ಸ್) (ಭಾರತ ಸರ್ಕಾರದ ಒಂದು ಉದ್ಯಮ) ಗೆ ಈ ವಿಮಾನ ನಿಲ್ದಾಣದಲ್ಲಿ